<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

S.C. 98/2023

PW- 27

CW- 48

ಪ್ರ. ಬೋ. ದಿನಾಂಕಃ 26-05-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಸಿದ್ದರಾಜು ಎಸ್ ಬಿ |
| ತಂದೆ/ಗಂಡನ ಹೆಸರು | : | ಬಸವರಾಜಪ್ಪ ಎಸ್ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ, ಹರಿಹರ ನಗರ ಠಾಣೆ |
| ವಾಸ | : | ಹರಿಹರ |

ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದ.

ನಾನು ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ದಿಃ 29-07-2019 ರಿಂದ ಈಗಲೂ ಸಹ ಪೊಲೀಸ್ ಪೇದೆಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ಈ ಕೇಸಿನಲ್ಲಿ ನಮ್ಮ ಠಾಣಾಧಿಕಾರಿಯಾದ ಚಾಸಾ-55 ದೇವಾನಂದ್ ಇವರು ಪಂಚನಾಮೆ ಸಮಯದಲ್ಲಿ ಫೋಟೋ ತೆಗೆಯುವ ಕೆಲಸಕ್ಕೆ ನನ್ನನ್ನು ನೇಮಿಸಿದ್ದು, ಆ ಪ್ರಕಾರ ದಿಃ15-05-2023 ರಂದು ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ಜರುಗಿಸಿದ ಆರೋಪಿತರ ಬಟ್ಟೆಗಳ ಅಮಾನತ್ತು ಮಹಜರ್ ನಿಪಿ.20 ಮಾಡುವ ಸಮಯದಲ್ಲಿ ನಿಪಿ.21 ಫೊಟೋ ತೆಗೆದಿರುತ್ತೇನೆ. ನಂತರ ಅದೇ ದಿನ ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಆರೋಪಿತರಿಂದ ತನಿಖಾಧಿಕಾರಿಗಳು ಚಾಕುವನ್ನು ಅಮಾನತ್ತುಪಡಿಸಿಕೊಂಡಿದ್ದು, ಆ ಸಮವುಯದಲ್ಲಿ ನಿಪಿ.23 ಫೋಟೋ ತೆಗೆದಿರುತ್ತೇನೆ.

ನಂತರ ದಾವಣಗೆರೆ ಸಿಜಿ ಆಸ್ಪತ್ರೆಯಲ್ಲಿ ಮೃತನ ಶವ ಪಂಚನಾಮೆ ಸಮಯದಲ್ಲಿ ನಿಪಿ.2 ಫೋಟೋ ತೆಗೆದಿರುತ್ತೇನೆ. ನಂತರ ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ನಿಪಿ.5 ಮತ್ತು 6 ಫೋಟೋ ತೆಗೆದಿರುತ್ತೇನೆ. ದಿ.16-05-2023 ರಂದು ಪ್ರಶಾಂತ್ ನಗರದಲ್ಲಿ ಅಬ್ದುಲ್ ನಾಸಿರ್ ರವರ ಮನೆ

ಮುಂಭಾಗದಲ್ಲಿ ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ನಿಪಿ.9 ಮತ್ತು 10 ಫೋಟೋ ತೆಗೆದಿರುತ್ತೇನೆ.

ದಿ.25-05-2023 ರಂದು ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಡಿವಿಆರ್ ಅಮಾನತ್ತು ಮಾಡಿಕೊಳ್ಳುವ ಸಮಯದಲ್ಲಿ ನಿಪಿ.26 ಮತ್ತು 27 ಫೋಟೋ ತೆಗೆದಿರುತ್ತೇನೆ. ಡಿವಿಡಿ ನೋಡುತ್ತಿದ್ದು, ಅದನ್ನು ನಿಪಿ..29 ಎಂದು ಈಗಾಗಲೇ ಗುರುತಿಸಲಾಗಿದೆ.

ದಿ.26-05-2023 ರಂದು ಹರಿಹರ ನಗರ ಪೊಲೀಸ್ ಠಾಣೆಯ ಆವಣದಲ್ಲಿ ಮೋಟರ್ ಬೈಕ್ ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ನಿಪಿ.30 ಫೋಟೋ ತೆಗೆದಿರುತ್ತೇನೆ. ಸದರಿ ಫೋಟೋ ಗಳನ್ನು ಹರಿಹರದ ಎ ಜೆ ಫೋಟೋ ಸ್ಟೂಡಿಯೋದಲ್ಲಿ ಪ್ರಿಂಟ್ ಹಾಕಿಕೊಂಡು ಬಂದು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಭಾರತೀಯ ಸಾಕ್ಷಿ ಅಧಿನಿಯಮ ಕಲಂ.65(ಬಿ) ಪ್ರಮಾಣಪತ್ರ ನೀಡಿದ್ದು, ಅದನ್ನು ನೋಡುತ್ತಿದ್ದು, ನಿಪಿ.69 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ.69(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:-</u> ಆರೋಪಿತರಪರ ಶ್ರೀ ಪಿ ಬಿ ವಕೀಲರಿಂದ.

ಆರೋಪಿತರಿಗೆ ಬೇರೆ ಬಟ್ಟೆಗಳನ್ನು ತಂದು ಯಾರು ಕೊಟ್ಟಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಆಸ್ಪತ್ರೆಯ ಮುಂಭಾಗದಲ್ಲಿ ನಾನು ಹೋದಾಗ ಆ ಸಮಯದಲ್ಲಿ ಬೇರೆ ಯಾರು ಇರಲಿಲ್ಲ. ಚಾಕುವನ್ನು ಯಾರು ತಂದು ಹಾಜರುಪಡಿಸಿದರು ಎಂದು ನನಗೆ ಗೊತ್ತಿಲ್ಲ. ಚಾಕು ಎಲ್ಲಿ ಇತ್ತು ಎಂಬುದರ ಬಗ್ಗೆ ನಾನು ಫೋಟೋ ತೆಗೆದಿಲ್ಲ. ಸ್ಥಳದಿಂದ ಚಾಕುವನ್ನು ತೆಗೆದುಕೊಳ್ಳುತ್ತಿರುವ ಸಮಯದಲ್ಲಿ ಫೋಟೋ ತೆಗೆದಿಲ್ಲ. ಪಂಚನಾಮೆ ತಯಾರು ಮಾಡುವ ಸಮಯದಲ್ಲಿ, ಬೆರಳಚ್ಚು ಮಾಡುವ ಸಮಯದಲ್ಲಿ ನಾನು ಫೋಟೋ ತೆಗೆದಿಲ್ಲ. ನಿಪಿ.29 ಡಿವಿಆರ್ ಅಮಾನತ್ತು ಪಡಿಸುಕೊಳ್ಳುವ ಸಮಯದಲ್ಲಿ ಬೆರಳಚ್ಚು ಮಾಡುವ ಸಮಯದಲ್ಲಿ ನಾನು ಫೋಟೋ ತೆಗೆದಿಲ್ಲ. ನಾನು ವಿಡಿಯೋ ನೋಡಿಲ್ಲ. ನನ್ನ ಸಮಕ್ಷಮ ವಿಡಿಯೋ ಪ್ಲೇ ಮಾಡಿಲ್ಲ. ಫೋಟೋದಲ್ಲಿರುವ ಬೈಕನ್ನು ಮಹದೇವಪ್ಪ ಎಂಬುವವರು ತಂದು ಹಾಜರುಪಡಿಸಿದ್ದರು. ಬೆರಳಚ್ಚು ಮಾಡುವ ಸಮಯದಲ್ಲಿ ನಾನು ಫೋಟೋ ತೆಗೆದಿಲ್ಲ. ಈ ಕೇಸಿಗೆ ಅನುಕೂಲವಾಗುವಂತೆ ನಾನು

ಫೋಟೋಗಳನ್ನು ಸೃಷ್ಟಿಸಿರುತ್ತೇನೆ ಎನ್ನುವುದು ಸುಳ್ಳು. ನಿಪಿ.69 ಪ್ರಮಾಣಪತ್ರದಲ್ಲಿ ಯಾವ ಫೋಟೋ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಕೊಂಡು ಬರಲಾಗಿದೆ ಎಂದು ಫೋಟೊ ಸ್ಟುಡಿಯೋದ ಹೆಸರು ನಮೂದು ಮಾಡಿಲ್ಲ. ಸದರಿ ಪ್ರಮಾಣಪತ್ರದಲ್ಲಿ ಫೋಟೋ ಸ್ಟುಡಿಯೋದ ಹೆಸರು ನಮೂದು ಮಾಡಲು ನನಗೆ ತೊಂದರೆ ಇರಲಿಲ್ಲ. ಪ್ರಿಂಟ್ ಹಾಕಿಸಲು ಎಷ್ಟು ಹಣ ಖರ್ಚಾಗಿದೆ ಎಂದು ಪ್ರಮಾಣಪತ್ರದಲ್ಲಿ ನಮೂದು ಮಾಡಿಲ್ಲ. ಸ್ಟುಡಿಯೋದವರಿಂದ ಹಣ ನೀಡಿದ ಬಗ್ಗೆ ರಸೀದಿ ಪಡೆದಿರುತ್ತೇನೆ. ಸದರಿ ರಸೀದಿ ಹಾಜರುಪಡಿಸಿರುವುದಿಲ್ಲ. ತನಿಖಾಧಿಕಾರಿಗಳು ನನಗೆ ಹೇಳಿಲ್ಲ , ಆ ಪ್ರಕಾರ ನಾನು ಅವರ ಜೊತೆ ಹೋಗಿಲ್ಲ, ಮಹಜರ್ ಮಾಡುವ ಸಮಯದಲ್ಲಿ ನಾನು ಹಾಜರರಿರಲಿಲ್ಲ ,ಯಾವುದೇ ಫೋಟೋ ತೆಗೆದಿಲ್ಲ, ಈ ಕೇಸಿಗೆ ಅನುಕೂಲವಾಗುವ ರೀತಿ ಫೋಟೋಗಳನ್ನು ಸೃಷ್ಟಿಸಿ, ತನಿಖಾಧಿಕಾರಿಗಳಿಗೆ ಸಹಾಯಮಾಡಲು ನಿಪಿ.69 ಸೃಷ್ಟನೆ ಮಾಡಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರುವಿಚಾರಣೆ</u>:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ.

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.